# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 185 |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ |
| ಉತ್ತರಿಸುವ ದಿನಾಂಕ | 14.02.2024 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

*****

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಮುಜರಾಯಿ ಇಲಾಖೆಯ ಅಧೀನಕ್ಕೊಳಪಟ್ಟ ದೇವಸ್ಥಾನಗಳು ಯಾವುವು; ಅವುಗಳಲ್ಲಿ ಎ, ಬಿ ಹಾಗೂ ಸಿ ವೃಂದದ ದೇವಸ್ಥಾನಗಳು ಯಾವುವು; (ಜಿಲ್ಲಾವಾರು ವಿವರ ನೀಡುವುದು)</td><td>ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ವ್ಯಾಪ್ತಿಗೆ ರಾಜ್ಯದ ಒಟ್ಟು 34,563 ದೇವಸ್ಥಾನಗಳು ಒಳಪಟ್ಟಿರುತ್ತವೆ. ಇಲಾಖಾ ದೇವಸ್ಥಾನಗಳನ್ನು ಆಯಾ ದೇವಾಲಯಗಳ ಆದಾಯಕ್ಕನುಗುಣವಾಗಿ ಪ್ರವರ್ಗ 'ಎ' 'ಬಿ' ಮತ್ತು 'ಸಿ' ದೇವಾಲಯಗಳೆಂದು ವರ್ಗೀಕರಿಸಲಾಗಿದೆ.
<table>
<tr><th>ಪ್ರವರ್ಗ</th><th>ವಿವರ</th><th>ಸಂಸ್ಥೆಗಳ ಸಂಖ್ಯೆ</th></tr>
<tr><td>ಎ</td><td>ವಾರ್ಷಿಕ ವರಮಾನವು ರೂ. ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು</td><td>205</td></tr>
<tr><td>ಬಿ</td><td>ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರಿ ರೂ. ಇಪ್ಪತ್ತೈದು ಲಕ್ಷಗಳನ್ನು ಮೀರದ ಸಂಸ್ಥೆಗಳು</td><td>193</td></tr>
<tr><td>ಸಿ</td><td>ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು</td><td>34165</td></tr>
<tr><td colspan="2">ಒಟ್ಟು</td><td>34563</td></tr>
</table>
(ಜಿಲ್ಲಾವಾರು ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ)</td></tr>
<tr><td>ಆ)</td><td>ಮುಜರಾಯಿ ಇಲಾಖೆಯ ಅಧೀನಕ್ಕೊಳಪಟ್ಟ ದೇವಸ್ಥಾನಗಳಿಗೆ ಸರ್ಕಾರ ವಾರ್ಷಿಕವಾಗಿ ಬಿಡುಗಡೆ ಮಾಡುವ ಅಭಿವೃದ್ಧಿ ಅನುದಾನ ಹಾಗೂ ತಸ್ತೀಕ್ ಅನುದಾನ ಎಷ್ಟು; ಅನುದಾನ ಬಿಡುಗಡೆಯ ಮಾನದಂಡಗಳೇನು; ಈ ಅನುದಾನ ಖರ್ಚು ಮಾಡುವ ಬಗ್ಗೆ ಇರುವ ನಿಯಮಗಳಾವುವು; ಕಳೆದ 3 ವರ್ಷಗಳಲ್ಲಿ ಬಿಡುಗಡೆ ಮಾಡಿದ ಅನುದಾನವೆಷ್ಟು; (ವಿವರ ನೀಡುವುದು)</td><td>ಮುಜರಾಯಿ ಇಲಾಖೆಯ ಅಧೀನಕ್ಕೊಳಪಟ್ಟ ದೇವಸ್ಥಾನಗಳಿಗೆ ಸರ್ಕಾರ ವಾರ್ಷಿಕವಾಗಿ ಬಿಡುಗಡೆ ಮಾಡುವ ಅಭಿವೃದ್ಧಿ ಅನುದಾನ ಹಾಗೂ ತಸ್ತೀಕ್ ಅನುದಾನವಾಗಿ ಒಟ್ಟು ರೂ. 135636.83 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.<br><br>ದುರಸ್ತಿ/ಜೀರ್ಣೋದ್ಧಾರ/ನಿರ್ಮಾಣ(ಸಾಮಾನ್ಯ ಯೋಜನೆ) ಯೋಜನೆಯಡಿ ಸರ್ಕಾರದ ಹಂತದಲ್ಲಿ ಅರ್ಹ ಧಾರ್ಮಿಕ ಸಂಸ್ಥೆ/ಮಠಗಳು/ದೇವಾಲಯಗಳಿಗೆ ಅನುದಾನ ಮಂಜೂರು ಮಾಡಿ ಬಿಡುಗಡೆ ಮಾಡಲಾಗುತ್ತಿದ್ದು, ಬಿಡುಗಡೆಯಾಗುವ ಅನುದಾನವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 95 ಮುಜಬಿ 2010 ದಿನಾಂಕ:20-09-2010 ರನ್ವಯ ಸಂಬಂಧಪಟ್ಟ ಸಂಸ್ಥೆ/ಮಠಗಳು/ದೇವಾಲಯಗಳ ಜೀರ್ಣೋದ್ಧಾರ/ ಅಭಿವೃದ್ಧಿ ಕಾಮಗಾರಿಗಳಿಗಾಗಿ ಖರ್ಚು ಮಾಡಲಾಗುತ್ತದೆ.<br><br>ಹಾಗೆಯೇ ತಸ್ತೀಕ್ ಮತ್ತು ವರ್ಷಾಸನ ಯೋಜನೆಗಳಡಿ ಕ್ರಮವಾಗಿ ಇನಾಂ ರದ್ದಿಯಾತಿ ಕಾಯ್ದೆ 1955 ಹಾಗೂ ಕರ್ನಾಟಕ ಹಲವು ರದ್ದಿಯಾತಿ ಕಾಯ್ದೆ 1977 ರನ್ವಯ ಮತ್ತು ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ರನ್ವಯ ಇನಾಂ /ಇನಾಂಯೇತರ ಜಮೀನುಗಳನ್ನು ಕಳೆದುಕೊಂಡ ಧಾರ್ಮಿಕ ಸಂಸ್ಥೆಗಳಿಗೆ ಪರಿಹಾರ ಧನವಾಗಿ ಮುಜರಾಯಿ/ಮುಜರಾಯಿಯೇತರ ದೇವಾಲಯಗಳಿಗೆ ಬಿಡುಗಡೆ ಮಾಡಲಾಗುತ್ತಿದ್ದು, ಆಯಾಯ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಹಾಗೂ ಇತರೆ ನೌಕರರ ವೇತನ ಹಾಗೂ ದೇವಾಲಯದ ದೈನಂದಿನ ಪೂಜಾ ವೆಚ್ಚಗಳಿಗಾಗಿ ಖರ್ಚು ಮಾಡಲಾಗುತ್ತಿದೆ.</td></tr>
</table>

| ಪ್ರಶ್ನೆ | | ಉತ್ತರ |
|---|---|---|
| | | ಕಳೆದ 03 ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ |

| ಯೋಜನೆ | 2020-21 | 2021-22 | 2022 | ಒಟ್ಟು (ಮೊತ್ತ ರೂ.ಲಕ್ಷಗಳಲ್ಲಿ) |
|---|---|---|---|---|
| ದುರಸ್ಥಿ/ಜೀರ್ಣೋದ್ಧಾರ/ ನಿರ್ಮಾಣ | 19177.50 | 8257.81 | 60612.46 | 88047.77 |
| ತಸ್ತೀಕ್ | 13462.00 | 13462.00 | 15600.00 | 42524.00 |
| ವರ್ಷಾಸನ | 1614. 00 | 1630.00 | 1821.06 | 5065.06 |
| ಒಟ್ಟು | 34253.50 | 23349.81 | 78033.52 | 135636.83 |

| | | |
|---|---|---|
| ಇ) | ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ ಎ, ಬಿ ಹಾಗೂ ಸಿ ವೃಂದದ ದೇವಸ್ಥಾನಗಳು ಯಾವುವು; ಇವುಗಳಲ್ಲಿ ಆಡಳಿತಾಧಿಕಾರಿಗಳು ಇರುವ ದೇವಸ್ಥಾನಗಳು ಮತ್ತು ವ್ಯವಸ್ಥಾಪನ ಸಮಿತಿಯಿಂದ ದೇವಸ್ಥಾನಗಳು ಎಷ್ಟು; (ವೃಂದವಾರು ದೇವಸ್ಥಾನವಾರು ವಿವರ ನೀಡುವುದು) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಧಾರ್ಮಿಕ ದತ್ತಿ ಇಲಾಖಾ ಆಡಳಿತಕ್ಕೆ ಒಳಪಡುವ ಒಟ್ಟು 1,304 ದೇವಾಲಯಗಳು ಇದ್ದು, ಪ್ರವರ್ಗ "ಎ", "ಬಿ" ಮತ್ತು "ಸಿ" ವೃಂದ ದೇವಾಲಯಗಳ ಸಂಖ್ಯೆವಾರು ವಿವರ ಈ ಕೆಳಕಂಡಂತೆ ಇದೆ. |

| ಕ್ರ ಸಂ | ಜಿಲ್ಲೆ | ಎ | ಬಿ | ಸಿ | ಒಟ್ಟು |
|---|---|---|---|---|---|
| 1. | ದಕ್ಷಿಣ ಕನ್ನಡ | 45 | 35 | 414 | 494 |
| 2. | ಉಡುಪಿ | 25 | 19 | 766 | 810 |
| | **ಒಟ್ಟು** | **70** | **54** | **1,180** | **1,304** |

ಈ ಮೇಲ್ಕಂಡ ದೇವಾಲಯಗಳಲ್ಲಿ ಆಡಳಿತಾಧಿಕಾರಿಗಳು ಇರುವ ದೇವಸ್ಥಾನಗಳು ಮತ್ತು ವ್ಯವಸ್ಥಾಪನ ಸಮಿತಿಯನ್ನು ರಚಿಸಿರುವ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ.

| | | |
|---|---|---|
| ಈ) | ಮುಜರಾಯಿ ಇಲಾಖೆಯ ಅಧೀನಕ್ಕೊಳಪಟ್ಟ ದೇವಸ್ಥಾನಗಳ ಆಡಳಿತ ಮಂಡಳಿಯ ಅನುವಂಶಿಕವಲ್ಲದ ಮೋಕ್ತೇಸರರ ನೇಮಕಾತಿ ನಿಯಮಗಳೇನು; (ವಿವರ ನೀಡುವುದು) | ಧಾರ್ಮಿಕ ದತ್ತಿ ಇಲಾಖಾ ಆಡಳಿತಕ್ಕೆ ಒಳಪಡುವ ದೇವಾಲಯಗಳಲ್ಲಿ ಅನುವಂಶಿಕವಲ್ಲದ ಮೋಕ್ತೇಸರರನ್ನು ನೇಮಕಾತಿ ಮಾಡಲು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಮತ್ತು ನಿಯಮಗಳು 2002ರಲ್ಲಿ ಅವಕಾಶ ಕಲ್ಪಿಸಿರುವುದಿಲ್ಲ. |
| ಉ) | ಮಂಗಳೂರಿನ ಮಂಗಳಾದೇವಿ ದೇವಸ್ಥಾನದ ಆಡಳಿತ ಮಂಡಳಿಯ ಅನುವಂಶಿಕವಲ್ಲದ ಮೋಕ್ತೇಸರನ್ನು ನೇಮಕಾತಿ ಮಾಡಿದ ಆದೇಶದಲ್ಲಿ ನೇಮಕಾತಿ ಅವಧಿಯನ್ನು ನಿಗಧಿಪಡಿಸಿದ್ದರೂ ನೇಮಕಾತಿ ಮಾಡಿ 15 ವರ್ಷ ಕಳೆದರೂ ಹೊಸದಾಗಿ ಅನುವಂಶಿಕವಲ್ಲದ ಮೋಕ್ತೇಸರರನ್ನು | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಬೋಳಾರ ಶ್ರೀ ಮಂಗಳಾದೇವಿ ದೇವಸ್ಥಾನವು ಧಾರ್ಮಿಕ ದತ್ತಿ ಇಲಾಖಾ ಆಡಳಿತಕ್ಕೆ ಒಳಪಡುವ ಸಮೂಹ "ಎ" ಪ್ರವರ್ಗದ ಅಧಿಸೂಚಿತ ಸಂಸ್ಥೆಯಾಗಿರುತ್ತದೆ. ಈ ಸಂಸ್ಥೆಯಲ್ಲಿ 4 ಜನ ಅನುವಂಶಿಕ ಮತ್ತು 4 ಜನ ಅನುವಂಶಿಕವಲ್ಲದ ಮೊಕ್ತೇಸರರು ಇದ್ದು ಆಡಳಿತ ನಡೆಸಲಾಗುತ್ತಿದೆ.<br><br>ಈ ಪದ್ಧತಿ ಹಿಂದಿನ ಮದ್ರಾಸ್ ಬೋರ್ಡ್ ಆಫ್ ಕಮೀಷನ್ ಇವರ ಒ.ಎಸ್. 375:43 ರಲ್ಲಿ ತೀರ್ಮಾನವಾದ ಆದೇಶ ಸಂ: 3249 ದಿನಾಂಕ 14.08.1944ರನ್ವಯ ರಚಿಸಲಾದ ಸ್ಕೀಮಿನನ್ವಯ ನಡೆಸಲಾಗುತ್ತಿತ್ತು.<br><br>ತದನಂತರ ಇಲಾಖೆಗೆ ಹೊಸ ಕಾಯ್ದೆ 2003 ರಲ್ಲಿ ಜಾರಿಯಾಗಿದ್ದು, ಸದರಿ ಕಾನೂನಿನ ವಿಧಿ 25 ಎ ಪ್ರಕಾರ " ಕಾನೂನ ಬದ್ಧವಾಗಿ ಪದವನ್ನು ಹೊಂದಿರುವಂತಹ ನಿರಸಿತ ಅಧಿನಿಯಮಗಳ ಅಡಿಯಲ್ಲಿ ರಚಿತವಾದ ಅಥವಾ ನೇಮಕವಾದ ಪ್ರತಿಯೊಂದು ವ್ಯವಸ್ಥಾಪನಾ ಸಮಿತಿ ಅಥವಾ ಪಂಚಸಮಿತಿ ಅಥವಾ ಧರ್ಮದರ್ಶಿ ಸಮಿತಿ ಅಥವಾ ವಂಶಪಾರಂಪರ್ಯವಲ್ಲದ ನ್ಯಾಸಧಾರಿಗಳು ಕರ್ನಾಟಕ |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td></td><td>ನೇಮಿಸದಿರಲು ಕಾರಣಗಳೇನು; ಯಾವಾಗ ಹೊಸ ಅನುವಂಶಿಕ ವಲ್ಲದ ಮೋಕ್ತೇಸರರನ್ನು ನೇಮಿಸಲಾಗುವುದು;</td><td>ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಎರಡನೇ ತಿದ್ದುಪಡಿ ಅಧಿನಿಯಮ, 2011 ಪ್ರಾರಂಭವಾದ ದಿನಾಂಕದಿಂದ ಅಂತ ಪದವನ್ನು ಹೊಂದಿರುವುದು ನಿಂತುಹೋಗತಕ್ಕದ್ದು" ಎಂದು ಇರುತ್ತದೆ.<br>ಧಾರ್ಮಿಕ ದತ್ತಿ ಆಯುಕ್ತರ ಪತ್ರ ಸಂಖ್ಯೆ: ಎಡಿಎಂ.8.ಸಿಆರ್:45/2012-13 ದಿನಾಂಕ: 07.06.2012 ರ ಪತ್ರದಲ್ಲಿ, ಯಾವುದೇ ವಂಶಪಾರಂಪರ್ಯವಲ್ಲದ ಮೊಕ್ತೇಸರರು ಅಧಿಸೂಚಿತ ಸಂಸ್ಥೆಗಳಲ್ಲಿ ಮುಂದುವರಿಯಲು ಕಾಯ್ದೆಯಲ್ಲಿ ಅವಕಾಶವಿಲ್ಲವೆಂಬ ಮಾಹಿತಿಯನ್ನು ನೀಡಿರುತ್ತಾರೆ. ಸದರಿ ಪತ್ರದ ಮಾಹಿತಿಯಂತೆ ಈ ದೇವಾಲಯದ ಅನುವಂಶಿಕವಲ್ಲದ ಮೊಕ್ತೇಸರರು ಅನುವಂಶಿಕ ಮೊಕ್ತೇಸರರಿಗೆ ಅಧಿಕಾರ ಹಸ್ತಾಂತರಿಸುವಂತೆ ಜಿಲ್ಲಾಧಿಕಾರಿಗಳು ಆದೇಶಿಸಿರುತ್ತಾರೆ.<br><br>ಧಾರ್ಮಿಕ ದತ್ತಿ ಆಯುಕ್ತರ ಪತ್ರ ಹಾಗೂ ಜಿಲ್ಲಾಧಿಕಾರಿಯವರ ಆದೇಶದ ವಿರುದ್ಧ ಸದರಿ ದೇವಳದ ಅನುವಂಶಿಕವಲ್ಲದ ಮೊಕ್ತೇಸರರು ಮಾನ್ಯ ಉಚ್ಚನ್ಯಾಯಾಲಯದಲ್ಲಿ W.P.NO: 52241/2012 ರಂತೆ ದಾವೆ ದಾಖಲಿಸಿರುತ್ತಾರೆ.<br><br>ಈ ಪ್ರಕರಣದ ದಿನಾಂಕ 08.03.2016ರ ಅಂತಿಮ ಆದೇಶದಲ್ಲಿ ಧಾರ್ಮಿಕ ದತ್ತಿ ಆಯುಕ್ತರ ದಿನಾಂಕ 07.06.2012 ಮತ್ತು ದಿನಾಂಕ 15.11.2012ರ ನಿರ್ದೇಶನವನ್ನು ರದ್ದುಗೊಳಿಸಲಾಗಿರುತ್ತದೆ.<br>ಪ್ರಸಕ್ತ ಮಾನ್ಯ ಉಚ್ಚ ನ್ಯಾಯಾಲಯದ W.P.NO: 52241/2012ರ ದಿನಾಂಕ08.03.2016ರ ಅಂತಿಮ ಆದೇಶದನ್ವಯ ಸದರಿ ದೇವಾಲಯದಲ್ಲಿ ಅನುವಂಶಿಕವಲ್ಲದ ಮೊಕ್ತೇಸರರು ಕಾರ್ಯನಿರ್ವಹಿಸುತ್ತಿದ್ದಾರೆ.</td></tr>
<tr><td>ಊ)</td><td>ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ ಎ ಗ್ರೇಡ್ ದೇವಸ್ಥಾನಗಳಲ್ಲಿ ಸಂಗ್ರಹವಾಗುವ ಆದಾಯವೆಷ್ಟು; ಈಗ ಎಷ್ಟು ಹಣ ಈ ದೇವಸ್ಥಾನಗಳಲ್ಲಿ ಲಭ್ಯವಿದೆ; ಯಾವ ಯಾವ ಕೆಲಸಗಳಿಗೆ ಮತ್ತು ಯಾವ ಯಾವ ಉದ್ದೇಶಗಳಿಗೆ ಈ ಹಣವನ್ನು ವ್ಯಯಿಸಲಾಗುತ್ತದೆ? (ಆದಾಯ ಮೂಲ & ವೆಚ್ಚದ ವಿಭಾಗವಾರು ವಿವರಗಳನ್ನು ನೀಡುವುದು)</td><td>• ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ 'ಎ' ಗ್ರೇಡ್ ದೇವಸ್ಥಾನಗಳಲ್ಲಿ ಸಂಗ್ರಹವಾಗುವ ಆದಾಯ ಮತ್ತು ಈ ದೇವಸ್ಥಾನಗಳಲ್ಲಿ ಲಭ್ಯವಿರುವ ಹಣಕಾಸಿನ ವಿವರ ಈ ಕೆಳಕಂಡಂತಿದೆ.<br><br>
<table>
<tr><th>ಕ್ರ ಸಂ</th><th>ಜಿಲ್ಲೆ</th><th>ಪ್ರವರ್ಗ 'ಎ' ದೇವಾಲಯಗಳ ಸಂಖ್ಯೆ</th><th>ಆದಾಯ (ರೂ. ಲಕ್ಷಗಳಲ್ಲಿ)</th><th>ಉಳಿತಾಯ ಖಾತೆಯಲ್ಲಿ ಲಭ್ಯವಿರುವ ಮೊತ್ತ (ರೂ. ಗಳಲ್ಲಿ)</th><th>ನಿಶ್ಚಿತ ಠೇವಣಿಯಲ್ಲಿ ತೊಡಗಿಸಲಾಗಿರುವ ಮೊತ್ತ (ರೂ. ಗಳಲ್ಲಿ)</th></tr>
<tr><td>1.</td><td>ದಕ್ಷಿಣ ಕನ್ನಡ</td><td>45</td><td>22551.04</td><td>633525089.00</td><td>5116930904.00</td></tr>
<tr><td>2.</td><td>ಉಡುಪಿ</td><td>25</td><td>12339.05</td><td>309959821.00</td><td>1840296541.00</td></tr>
</table>
(ಆದಾಯ ಮೂಲ & ವೆಚ್ಚದ ವಿಭಾಗವಾರು ವಿವರಗಳನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ.)<br><br>• ಸದರಿ ಅಧಿಸೂಚಿತ ಸಂಸ್ಥೆಗಳಲ್ಲಿ ಸಂಗ್ರಹವಾಗುವ ಮೊತ್ತಗಳನ್ನು ಆಯಾಯ ದೇವಾಲಯಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆ. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆಯ ಕಲಂ 36 (1) ಅಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದಂತೆ, ದೇವಾಲಯದ ನಿತ್ಯ ಕಟ್ಲೆ, ಹೆಚ್ಚು ಕಟ್ಲೆ, ಜಾತ್ರೆ, ಹಬ್ಬಗಳು, ಸಿಬ್ಬಂದಿ ವೆಚ್ಚ ಹಾಗೂ ಅಭಿವೃದ್ಧಿ ಕಾರ್ಯಗಳು ಮತ್ತು ದೇವಾಲಯಗಳ ನಿರ್ವಹಣೆಗಾಗಿ ಬಳಸಲಾಗುತ್ತದೆ.</td></tr>
</table>

ಕಂಇ 10 ಮುಸಪ್ರ 2024

(ರಾಮಲಿಂಗಾರೆಡ್ಡಿ)
**ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು**